**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**

<u>ಸಿ.ಸಿ ನಂಃ **351/2016**</u>

**ದಿನಾಂಕಃ 08-02-2024 ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನವನ್ನು ಭೊಧಿಸಲಾಯಿತು.**

**ಪಾಟಿ ಸವಾಲು ಃಆರೋಪಿತರ ಪರ ಶ್ರೀ. ಜಿ.ಎಸ್.ಎನ್ . ವಕೀಲರಿಂದ**

1. ಆರೋಪಿತರು ನಮ್ಮ ಸಂಬಂಧಿಕರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಕುಲದವರು ಎಂದು ನುಡಿಯುತ್ತಾರೆ. ನಮ್ಮ ಮತ್ತು ಆರೋಪಿತರ ಮನೆ 4-5 ಮನೆ ಆದ ನಂತರ ಇದೆ. ದಿನಾಂಕಃ 26-06-2016 ರಂದು ಮನೆಯ ಹೊರಗಡೆ ಮಲಗಿಕೊಂಡಾಗ ನಾನು ಮತ್ತು ಚಾಸಾಃ 5 ರವರು ದೂರದಲ್ಲಿ ಮಲಗಿಕೊಂಡಿರುತ್ತಾರೆ. ಚಾಸಾಃ 4 ರವರ ಮನೆ ನಮ್ಮ ಮನೆಯಿಂದ 80 ರಿಂದ 90 ಫೀಟ ಅಂತರದಲ್ಲಿದೆ. ಸದರಿ ನಮ್ಮ ಮತ್ತು ಚಾಸಾಃ 4 ರವರ ಮನೆಯ ನಡುವೆ ಎಷ್ಟು ಮನೆಗಳು ಇವೆ ಎಂದರೆ ಸಾಕ್ಷಿಯು ರಸ್ತೆ ಮಾತ್ರ ಇದೆ ಎಂದು ನುಡಿಯುತ್ತಾರೆ. ಚಾಸಾಃ 4 ರವರ ಮನೆಯಲ್ಲಿ ಅವರ ಮಗಳು ಮಾತ್ರ ಇರುತ್ತಾಳೆ. ಸದರಿ ಚಾಸಾಃ 4 ರವರು ಮನೆಯಲ್ಲಿ ಮಲಗಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಮನೆಯ ಹೊರಗಡೆ ಮಲಗಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಚಸಾಃ 4 ರವರಿಗೆ 1 ನೇ ಆರೋಪಿತನು ಸೀರೆ ಹಿಡಿದು ಎಳೆದಾಡಿದ ವಿಷಯ ಯಾರು ಹೇಳಿರುತ್ತಾರೆ? ಎಂದರೆ ಸಾಕ್ಷಿಯು ಸಪ್ಪಳ ಕೇಳಿದ್ದರಿಂದ ನನಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಚಾಸಾಃ 4 ರವರ ಮನೆಗೆ ನಾನು ಮತ್ತು ಚಾಸಾಃ 5 ರವರು ಹೋಗಿರುತ್ತೇವೆ.

2. ಸದರಿ ಚಾಸಾಃ 4, 5 ಮತ್ತು ನನ್ನ ಹೊತುಪಡಿಸಿ ಯಾರೂ ಇರಲಿಲ್ಲ ಎಂದರೆ ಸಾಕ್ಷಿಯು 1 ನೇ ಆರೋಪಿತನು ಇದ್ದನು ಎಂದು ನುಡಿಯುತ್ತಾರೆ. ಸದರಿ 1 ನೇ ಆರೋಪಿತನು ನಮಗೆ ಬೈದ ಬಗ್ಗೆ ನ್ಯಾಯ ಪಂಚಾಯಿತಿ ಆಗಿರುವುದಿಲ್ಲ. ದಿನಾಂಕಃ 28-06-2016 ರಂದು 1 ನೇ ಆರೋಪಿತನು ಮುಂಜಾನೆ 5.00 ಗಂಟೆಗೆ ಬಂದಾಗ ಕತ್ತಲು ಇತ್ತು ಎಂದರೆ ಸರಿ. ಸದರಿ ಕತ್ತಲಿನಲ್ಲಿ ಯಾರು ಬಂದಿರುತ್ತಾರೆ ಎಂದು ಕಾಣಿಸುವುದಿಲ್ಲ ಎಂದರೆ ಸಾಕ್ಷಿಯು ಪಕ್ಕದಲ್ಲಿ ಲೈಟ ಕಂಬ ಇತ್ತು ಎಂದು ನುಡಿಯುತ್ತಾರೆ. ಸದರಿ ಲೈಟ ಕಂಬ ನಾವು ನಿಂತಿದ್ದ ಜಾಗದಿಂದ 25 ಫೀಟ ದೂರದಲ್ಲಿದೆ. 1 ನೇ ಆರೋಪಿತನು ನನಗೆ ಕೋಲಿನಿಂದ ನನ್ನ ಬಲಗಾಲಿಗೆ ಮತ್ತು ತಲೆಗೆ ಹೊಡೆದಾಗ ಅಂಗಿಯ ಮೆಲೆ ರಕ್ತ ಬಿದ್ದಿತ್ತು. ಸದರಿ ಅಂಗಿಯನ್ನು ಪೊಲಿಸರು ವಶಪಡಿಸಿಕೊಂಡಿರುವುದಿಲ್ಲ. 1 ನೇ ಆರೋಪಿತನ

ಕೈಯಿಂದ ಉಳಿದ ಆರೋಪಿತರು ಕೋಲು ತೆಗೆದುಕೊಂಡು ಚಾಸಾಃ 5 ರವರಿಗೆ ತಲೆಗೆ ಮತ್ತು ಕಣ್ಣಿಗೆ ಹೊಡೆದಾಗ ಅವರಿಗೂ ಅಂಗಿಯ ಮೇಲೆ ರಕ್ತ ಬಿದ್ದಿತ್ತು ಎಂದರೆ ಸರಿ. ಸದರಿ ಅಂಗಿಯನ್ನು ಪೊಲಿಸರು ವಶಪಡಿಸಿಕೊಂಡಿರುವುದಿಲ್ಲ.

3. 1 ನೇ ಆರೋಪಿತನು ಬೆಳಿಗ್ಗೆ ಬಂದಾಗ ಮುಂಜಾನೆ ನನಗೆ ಹೊಡೆದು ಮುಂದೆ ಹೋದಾಗ ಚಾಸಾಃ 5 ರವರು ಸಿಕ್ಕಿರುತ್ತಾರೆ. ಸದರಿ ಗಲಾಟೆಯು ನನ್ನ ಮನೆಯ ಮುಂದೆ ಆಗಿರುತ್ತದೆ. ಸದರಿ ನನ್ನ ಮನೆಯ ಮುಂದೆ ಗಲಾಟೆಯಾದಾಗ ಸ್ಥಳದಲ್ಲಿ ನಾನು, ನನ್ನ ಹೆಂಡತಿ, ಮಕ್ಕಳು ಮತ್ತು ಚಂದ್ರಶೇಖರ ಹೆಂಡತಿ, ಮಕ್ಕಳು ಇದ್ದರು. ಜಗಳವು ನಮ್ಮ ಮನೆಯ ಮುಂದೆ 5 ರಿಂದ 10 ನಿಮಿಷಗಳ ಕಾಲ ಆಗಿರುತ್ತದೆ. ಚಾಸಾಃ 5 ರವರು ಸೈದಾಪೂರದಲ್ಲಿ ಸಾ ಮಿಲ್ (ಕಟ್ಟಿಗೆ ಅಡ್ಡಾ) ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಸದರಿ ಚಾಸಾಃ 5 ರವರು ಕಟ್ಟಿಗೆ ಅಡ್ಡಾದಲ್ಲಿ ಕೆಲಸ ಮಾಡುತ್ತಿರುವಾಗ ಕಟ್ಟಿಗೆ ಹಾಕುತ್ತಿದ್ದನು ಎಂದರೆ ಸರಿ. ಈ ಘಟನೆಗಿಂತ ಮುಂಚೆ ಚಾಸಾಃ 5 ರವರಿಗೆ ಸದರಿ ಕಟ್ಟಿಗೆ ಅಡ್ಡಾದಲ್ಲಿ ಕೆಲಸ ಮಾಡುತ್ತಿರುವಾಗ ಬ್ಲೇಡ ಕಣ್ಣಿಗೆ ಹತ್ತಿರುತ್ತದೆ ಎಂದರೆ ಸರಿ. ಸದರಿ ಚಾಸಾಃ 5 ರವರ ಕಣ್ಣು ಹೋಗಿರುತ್ತದೆ.

4. ದಿನಾಂಕಃ 28-06-2016 ರಂದು ಆದ ಜಗಳವು ನಮ್ಮ ಹಿರಿಯರು ನ್ಯಾಯ ಪಂಚಾಯಿತಿ ಮಾಡಿರುವುದಿಲ್ಲ. ಸದರಿ ಜಗಳವಾದ ನಂತರ ಮೊದಲು ಪೊಲಿಸ ಠಾಣೆಗೆ ಹೋಗಿ ಆಮೇಲೆ ಆಸ್ಪತ್ರೆಗೆ ಹೋಗಿರುತ್ತೇವೆ. ಜಗಳವಾಗುವಾಗ ಯಾರೂ ಸೇರಿರುವುದಿಲ್ಲ. ಜಗಳವಾದ ನಂತರ ಚಾಸಾಃ 6 ರಿಂದ 8 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ, ಊರಿನವರು ಬಂದಿರುತ್ತಾರೆ. ಸದರಿ ಮು. ಮಾ. 1 ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ನಾನು ಪೊಲಿಸ ಠಾಣೆಗೆ ಹೋದ ನಂತರ ನನ್ನ ಜೊತೆ ಯಾರು-ಯಾರು ಬಂದಿದ್ದರು ಎಂದರೆ ಸಾಕ್ಷಿಯು ಸಂತೋಷಮ್ಮ, ತಿಪ್ಪಮ್ಮ, ಸೌಭಾಗ್ಯಮ್ಮ ಇವರು ಬಂದಿರುತ್ತಾರೆ. ನನಗೆ ಏಟು ಬಿದ್ದಿದ್ದರಿಂದ ನನಗೆ ನೆನಪು ಇರುವುದಿಲ್ಲ. ಸದರಿ ನನಗೆ ಪ್ರಜ್ಞೆ ತಪ್ಪಿತ್ತು ಆದರೆ ನೀರು ಕುಡಿದ ನಂತರ 5-10 ನಿಮಿಷದ ನಂತರ ಪ್ರಜ್ಞೆ ಬಂದಿರುತ್ತದೆ. ಸದರಿ ಚಾಸಾಃ 7 ರವರು ಮತ್ತು ನಾನು ಹೇಳಿಕೆ ಹೇಳಿರುತ್ತೇವೆ. ಪೊಲಿಸ ಠಾಣೆಗೆ ಜಗಳವಾದ ನಂತರ ಅದೆ ದಿನ ಹೋಗಿರುತ್ತೇವೆ. ಅದೆ ದಿನ ಮುಂಜಾನೆ 7.15 ಗಂಟೆಗೆ ಹೋಗಿರುತ್ತೇವೆ. ನಾವು ಪೊಲಿಸ ಠಾಣೆಗೆ ಹೋದ ನಂತರ ಪೊಲಿಸರ ಮುಂದೆ ದೂರನ್ನು ನೀಡಿರುತ್ತೇವೆ. ಆಸ್ಪತ್ರೆಗೆ ಹೋದ ನಂತರ

ಅಲ್ಲಿ ಪೊಲಿಸರು ಬಂದಿರುತ್ತಾರೆ. ಸದರಿ ನಿಪಿ-1 ಕ್ಕೆ ಸಹಿಯನ್ನು ಆಸ್ಪತ್ರೆಯಲ್ಲಿ ಮಾಡಿರುತ್ತೇನೆ. ಸದರಿ ನನ್ನನ್ನು ಆಸ್ಪತ್ರೆಯಿಂದ ರಾಯಚೂರಿಗೆ ಕಳುಹಿಸಿರುತ್ತಾರೆ. ರಾಯಚೂರು ಆಸ್ಪತ್ರೆಯಲ್ಲಿ ನಾನು 5-6 ತಾಸ ಇದ್ದ ನಂತರ ಬೆಂಗಳೂರಿಗೆ ಕರೆದುಕೊಂಡು ಹೋಗಿರುತ್ತಾರೆ. ರಾಯಚೂರಿನಿಂದ ಬಂದ ನಂತರ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಅದೆ ದಿನ ಬಂದು ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸದರಿ ಪಂಚನಾಮೆ ನನ್ನ ಕುಟುಂಬದವರು ಮತ್ತು ಚಾಸಾಃ 5 ರವರ ಕುಟುಂಬದವರು ಹಾಗೂ ಊರಿನವರು ಸೇರಿದ್ದರು. ಪಂಚನಾಮೆಯನ್ನು ಮಾಡುವ ಕಾಲ ಅರ್ಧ ಗಂಟೆಯವರೆಗೆ ಇದ್ದರು. ಪಂಚನಾಮೆ ನನಗೆ ಯಾವ ಗಂಟೆಯಿಂದ ಮಾಡಿರುತ್ತಾರೆ ಎಂದು ನನಗೆ ನೆನಪು ಇರುವುದಿಲ್ಲ. ಸದರಿ ಪಂಚನಾಮೆಯಾದ ನಂತರ ಪೊಲಿಸರು ಊರಿಗೆ ಬಂದಿರುವುದಿಲ್ಲ. ನಾವು ಪೊಲಿಸ ಠಾಣೆಗೆ ಹೋಗಿರುವುದಿಲ್ಲ ಎಂದರೆ ಸರಿ. ಸದರಿ 1 ನೇ ಆರೋಪಿತನು ರಾಜಕೀಯ ಪಕ್ಕದ ಕಾರ್ಯಕರ್ತ ಎಂದರೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. 1 ನೇ ಆರೋಪಿತನು ಪಕ್ಷದ ಕಾರ್ಯಕರ್ತ ಇರುವುದರಿಂದ ಸುಧಾರಣೆ ಕಾರ್ಯ ಮಾಡುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿತನು ಟೆಂಡರ ಕೆಲಸ ಹಿಡಿಯುತ್ತಾನೆ ಎಂದರೆ ಸರಿಯಲ್ಲ. 1 ನೇ ಆರೋಪಿತನ ತಾಯಿ ಗ್ರಾಮ ಪಂಚಾಯಿತಿ ಸದಸ್ಯರು ಇದ್ದರು ಎಂದರೆ ಸರಿ. ಸದರಿ ಅವರು ಯಾವ ರಾಜಕೀಯ ಪಕ್ಷದಿಂದ ಆಯ್ಕೆಯಾಗಿ ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

5. ಸದರಿ 1 ನೇ ಆರೋಪಿತನ ತಾಯಿ ಕೆಲಸಗಳನ್ನು ಇವನೇ ಟೆಂಡರ ಹಿಡಿದು ಕೆಲಸ ಮಾಡುತ್ತಿದ್ದನು. 1 ನೇ ಆರೋಪಿತನು ಮಾತ್ರ ಕೆಲಸ ಹಿಡಿಯುತ್ತಾರೆ ಸದರಿ ಅವನು ನಮಗೆ ಶೇಕಡಾ ರೂಪಾಯಿ ನೀಡುವುದಿಲ್ಲ ಆದ್ದರಿಂದ ನಮಗೆ ಅವನ ಮೇಲೆ ವೈಶಮ್ಯ ಇರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾಃ 5 ರವರು ಕೂಡಿ 1 ನೇ ಆರೋಪಿತನು ನಮಗೆ ಪರಸೆಂಟೆಜ ನೀಡದೆ ಇರುವುದರಿಂದ ನಾವು ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಅದಕ್ಕೆ ಏನೂ ಸಂಬಂಧವಿರುವುದಿಲ್ಲ 1 ನೇ ಆರೋಪಿತನು ನಮ್ಮ ಹೆಣ್ಣು ಮಕ್ಕಳಿಗೆ ಚುಡಾಯಿಸಿದ್ದರಿಂದ ಈ ಪ್ರಕರಣ ಆಗಿರುತ್ತದೆ ಎಂದು ನುಡಿಯುತ್ತಾರೆ.

6. ದಿನಾಂಕಃ 26-06-2016 ರಂದು ನಾನು ಮನೆಯ ಹೊರಗಡೆ ಮಲಗಿಕೊಂಡಾ ಚಾಸಾಃ 4 ರವರ ಮನೆಯಿಂದ ಚಿರಾಡುವ ಸಪ್ಪಳ ಬಂದ ನಂತರ ನಾನು ಮತ್ತು ಚಾಸಾಃ 5 ರವರು ಹೋದಾಗ 1

ನೇ ಆರೋಪಿತನು ಚಾಸಾಃ 4 ರವರ ಸೀರೆ ಹಿಡಿದು ಎಳೆದಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿತನು ನನಗೆ ಬೈದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆರೋಪಿತನು ನನಗೆ ತಪ್ಪಾಯಿತು ಎಂದು ಒಪ್ಪಿಕೊಂಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೆ ದಿನ ಆರೋಪಿತನು ನನಗೆ ಕೋಲಿನಿಂದ ಕಾಲಿಗೆ ಮತ್ತು ಸಲೆಗೆ ಹೊಡೆದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉಳಿದ ಆರೋಪಿತರು 1 ನೇ ಆರೋಪಿತನ ಕಡೆಯಿಂದ ಕೋಲು ತೆಗೆದುಕೊಂಡು ಚಾಸಾಃ 5 ರವರಿಗೆ ತಲೆಗೆ ಮತ್ತು ಕಣ್ಣಿಗೆ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಗಳವನ್ನು ಚಾಸಾಃ 6 ರಿಂದ 8 ರವರು ಬಿಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲಿಸರು ಬಂದು ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯಲ್ಲಿ ಮುದಕಪ್ಪ, ಮಾರ್ತಾಂಡಪ್ಪ, ಮಲ್ಲಪ್ಪ ಹಾಗೂ ಉಳಿದ ಜನರು ಉಪಸ್ಥಿತರಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾಃ 4 ರವರಿಗೆ ಕೈಗೆ ಮತ್ತು ಬಲಗೈ ಮೊಣಕಟ್ಟಿಗೆ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೆ ಜಗಳವಾಗದೇ ಇದ್ದರೂ ಕೂಡ 1 ನೇ ಆರೋಪಿತನು ಪರಸಂಟೇಜ ನೀಡದೆ ಇರುವುದರಿಂದ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ**